**ಒ.ಎಸ್.ನಂ. 82/19**

**ಪಿ. ಡಬ್ಲೂ-1**

**ದಿನಾಂಕಃ 27.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದಃ-**

ನಾನು ಚಿಕ್ಕಕೆರೆಯೂರು ಗ್ರಾಮದಲ್ಲಿ ವಾಸ ಇರುತ್ತೇನೆ. ನನ್ನ ತಂದೆ ಊರು ಸಹ ಅದೇ ಆಗಿರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳು ತಿಳಿದಿರುತ್ತದೆ. ನಾನು ಭಾಗಾಂಶ ಕೋರಿ ಸದರಿ ದಾವೆ ಸಲ್ಲಿಸಿರುತ್ತೇನೆ. ಪ್ರತಿವಾದಿ 1 ರಿಂದ 5 ರವರು ನಮ್ಮ ಕುಟುಂಬದವರು. ನಾನು ಸರ್ವೇ ನಂ 29/1, 45/1 ಸ್ವತ್ತುಗಳಿಗೆ ದಾವೆ ಸಲ್ಲಿಸಿರುತ್ತೇನೆ. ಸರ್ವೇ ನಂ 29/2 ರಲ್ಲಿ 2 ಎಕರೆ ಜಮೀನಿನಲ್ಲಿ 2 ನೇ ಪ್ರತಿವಾದಿ ಮತ್ತು 4 ಎಕರೆ ಜಮೀನಿನಲ್ಲಿ ಪ್ರತಿವಾದಿ 7 ರವರು ಸ್ವಾಧೀನ ಇರುತ್ತಾರೆ. ದಾವಾ ಆಸ್ತಿಗಳೆಲ್ಲ ಒಟ್ಟು ಕುಟುಂಬದ ಆಸ್ತಿಗಳು ಆಗಿರುತ್ತವೆ. ಸದರಿ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ನನ್ನ ತಾಯಿ ಹೆಸರಿನಲ್ಲಿ ಇದ್ದ ಖಾತೆಯನ್ನು ಹುಣಸೂರು ಎಸಿ ನ್ಯಾಯಾಲಯದಲ್ಲಿ ಪ್ರಶ್ನೀಸಿರುತ್ತೇನೆ. ನನ್ನ ತಾಯಿ ಹೆಸರಿನಲ್ಲಿ ಇದ್ದ ಖಾತೆಯನ್ನು ಮಾತ್ರ ಪ್ರಶ್ನೀಸಿರುತ್ತೇನೆ ಅದರ ಸರ್ವೇ ನಂ 45/1. ಸದರಿ ಮೇಲ್ಮನವಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ಆದೇಶದ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ 1 ಪ್ರತಿವಾದಿ 7 ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನಿಪಿ 7 ರಲ್ಲಿ ಪ್ರತಿವಾದಿ 4 ಮತ್ತು 5 ರವರಿಂದ ಪ್ರತಿವಾದಿ 6 ರವರು ಕ್ರಯಕ್ಕೆ ಪಡೆದಿರುತ್ತಾರೆ ಎಂದು ನಮೂದು ಇದೆ ಎಂದರೆ ಸರಿ.

ನಿಪಿ 9 ಪ್ರತಿವಾದಿ 6 ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನಿಪಿ 13 ರಂತೆ ದಿಃ15.05.2000 ರಲ್ಲಿ ಪ್ರತಿವಾದಿ 4 ಮತ್ತು 5 ರವರು ಮತ್ತು ಅವರ ಕುಟುಂಬದವರು ಪ್ರತಿವಾದಿ 6 ರವರಿಗೆ ದಾವಾ ಐಟಂ ನಂ 1 ನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ 4 ಮತ್ತು 5 ರವರ ಭಾಗಕ್ಕೆ ಬಂದ ಆಸ್ತಿಯನ್ನು ಪ್ರತಿವಾದಿ 6 ರವರಿಗೆ ಮಾರಾಟ ಮಾಡುತ್ತಿದ್ದೇವೆ ಎಂದು ಸದರಿ ಕ್ರಯ ಪತ್ರದಲ್ಲಿ ನಮೂದಿಸಿದ್ದಾರೆ ಎಂದರೆ ಸರಿ. 2000 ಇಸವಿಯಿಂದ ಪ್ರತಿವಾದಿ 6 ರವರು ಸ್ವಾಧೀನ ಇದ್ದು ನಂತರ

ದಿಃ26.09.2008 ರಲ್ಲಿ ಪ್ರತಿವಾದಿ 7 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಕ್ರಯಕ್ಕೆ ಪಡೆದಾಗಿನಿಂದ ಇಲ್ಲಿಯವರೆಗೂ ಪ್ರತಿವಾದಿ 7 ರವರು ಸ್ವಾಧೀನ ಇರುತ್ತಾರೆ ಎಂದರೆ ಸರಿ. ಪ್ರತಿವಾದಿ 7 ರವರು ದಾವಾ ಐಟಂ ನಂ 1 ರ ಕ್ರಯದಾರರಾಗಿ ಸ್ವಾಧೀನ ಇರುವುದರಿಂದ ಸದರಿ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ಈಗಾಗಲೇ ನಮ್ಮ ಕುಟುಂಬದಲ್ಲಿ ವಿಭಾಗ ಆಗಿದ್ದು ಸದರಿ ವಿಭಾಗದಲ್ಲಿ ಪ್ರತಿವಾದಿ 4 ಮತ್ತು 5 ರವರಿಗೆ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ 7 ರವರು ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುವುದಿಲ್ಲ ಎಂದರೆ ಕ್ರಯ ಪತ್ರಕ್ಕೆ ಹೆಣ್ಣು ಮಕ್ಕಳ ಸಹಿ ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 7 ರವರು 6 ಪ್ರತಿವಾದಿಯಿಂದ ಖರೀದಿ ಮಾಡಿರುವುದರಿಂದ ನಮ್ಮಗಳ ಸಹಿ ಪಡೆಯುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ರಲ್ಲಿ ನನಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**